ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಹಿರಿಯೂರು

ಉಪಸ್ಥಿತರು ಃ- ಶ್ರೀಮತಿ. ಸುಜಾತ ಸುವರ್ಣ ಬಿ,
ಬಿ.ಕಾಂ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,
ಹಿರಿಯೂರು , ಚಿತ್ರದುರ್ಗ ಜಿಲ್ಲೆ.

**ಅಸಲು ದಾವಾ ಸಂಖ್ಯೆ: 44/2025**

ದಿನಾಂಕಃ 10 ನೇ ಜೂನ್ –2026.

ವಾದಿಯರು ಃ

1. ಎನ್ ನಟರಾಜ
ತಂದೆ ಎನ್ ನರಸಿಂಹಮೂರ್ತಿ
ವಯಸ್ಸು ಸುಮಾರು 43 ವರ್ಷ,
ಜಿರಾಯ್ತಿದಾರರು ಮುಖ್ಯಪೇದೆ,
ಎಸ್.ಪಿ ಕಛೇರಿ, ಚಿತ್ರದುರ್ಗ

2. ಎನ್ ಚೇತನ್
ತಂದೆ ಎನ್ ನರಸಿಂಹಮೂರ್ತಿ
ವಯಸ್ಸು ಸುಮಾರು 40 ವರ್ಷ,
ಜಿರಾಯ್ತಿದಾರರು

3. ಎನ್ ಪ್ರಸಾದ್
ತಂದೆ ಎನ್ ನರಸಿಂಹಮೂರ್ತಿ
ವಯಸ್ಸು ಸುಮಾರು 38 ವರ್ಷ,
ಜಿರಾಯ್ತಿದಾರರು

1 ರಿಂದ 3 ನೇ ವಾದಿಯವರ
ವಾಸಃ ಅಮ್ಮ ನಿಲಯ, 1 ನೇ ಮುಖ್ಯ ರಸ್ತೆ
ಸಾಮ್ರಾಟ್ ಲೇಔಟ್,
ಬ್ಯಾಂಕ್ ಕಾಲೋನಿ,

SUJATHA SUVARNA B
Digitally signed by SUJATHA SUVARNA B
Date: 2026.06.16 12:16:38 +0530

ಚಿತ್ರದುರ್ಗ ಟೌನ್

4. ಸಿ. ಗೋಪಿ
ತಂದೆ ಎಸ್ ಚಂಚಲ ಕುಮಾರ್,
ವಯಸ್ಸು  ಸುಮಾರು 39 ವರ್ಷ,
ವಾಸಃ ಐ.ಯು.ಡಿ.ಪಿ ಲೇಔಟ್,
ಮಹಾತ್ಮ ಗಾಂಧಿ ನಗರ,
2 ನೇ ರಸ್ತೆ, 4 ನೇ ಕ್ರಾಸ್,
ಚಿತ್ರದುರ್ಗ

(ವಾದಿಯರ ಪರವಾಗಿ  ಜಿ.ಕೆ.ಎಂ ವಕೀಲರು)

–ವಿರುದ್ಧ–

ಪ್ರತಿವಾದಿಯರುಃ

1. ಶ್ರೀವಲ್ಲಿ,
ಕೋಂ ಷಣ್ಮುಖ (ತನ್ನನ್ನು ತಾನು
ಸಾಲಮ್ಮ ಕೋಂ ಎಂ ಸಂಜೀವಪ್ಪ ಎಂದು
ಘೋಷಿಸಿಕೊಂಡಿರುವುದು),
ವಯಸ್ಸು ಸುಮಾರು 40 ವರ್ಷ,
ವಾಸ: 20 ನೇ ರಸ್ತೆ, ಆಂಜನೇಯ
ದೇವಸ್ಥಾನ, ಮಾರುತಿ ನಗರ, ಕಂಪ್ಲಿ.

2. ಸುರೇಶ್ ಚೌದರಿ,
ಬಿನ್ ಪ್ರಸಾದ್ ಚಾಂದ್,
ಸುಮಾರು 42 ವರ್ಷ,
ಅಕ್ಕಿ ವ್ಯಾಪಾರಿ,
ವಾಸಃ  ಬಸವೇಶ್ವರ ನಗರ,
4 ನೇ ಕ್ರಾಸ್, ತಿಪಟೂರು ಟೌನ್

3. ಟಿ. ತಿಮ್ಮಯ್ಯ
ಬಿನ್ ತಿಮ್ಮಾಬೋವಿ,

ಸುಮಾರು 37 ವರ್ಷ,
ದಿಃ 07.03.2024 ರಂತೆ ಪ್ರಭಾರಿ ಉಪ–
ನೊಂದಣಾಧಿಕಾರಿಗಳು, ಹಿರಿಯೂರು
ಉಪ–ನೊಂದಣಿ ಕಛೇರಿಯಲ್ಲಿ ಎಸ್.ಡಿ.ಎ ಆಗಿ
ಕೆಲಸ ನಿರ್ವಹಿಸುತ್ತಿದ್ದಾರೆ.

4. ಮಾಯವರ್ಮ
ಬಿನ್ ಲೇಟ್ ಎ.ಕೆ ರಾಮಾಯ್ಯ,
ಸುಮಾರು 40 ವರ್ಷ,
ಗ್ರಾಮ ಲೆಕ್ಕಾಧಿಕಾರಿ,
ಕಸಬ ಹೋಬಳಿ,
ಹಿರಿಯೂರು ತಾಲ್ಲೂಕು ಕಛೇರಿ,
ಹಿರಿಯೂರು

5. ಸ್ವಾಮಿ,
ಬಿನ್ ಲೇಟ್ ಜಗದೀಶ,
ಸುಮಾರು 44 ವರ್ಷ,
ಕಂದಾಯ ನೀರಿಕ್ಷಕರು,
ಕಸಬಾ ಹೋಬಳಿ,
ಹಿರಿಯೂರು ತಾಲ್ಲೂಕು

6. ಮುರಳಿ
ಬಿನ್ ಮೋಹನ್ ರಾಜ್,
ಸುಮಾರು 41 ವರ್ಷ,
ಅಂಚೆ ಚೀಟಿ ಮಾರಾಟಗಾರರು,
ಉಪ–ನೊಂದಣಾಧಿಕಾರಿಗಳು, ಹಿರಿಯೂರು

7. ಶ್ರೀಧರ
ಬಿನ್ ಡಿ ಬಾಬು ರಾವ್,
ಸುಮಾರು 43 ವರ್ಷ,

ವಾಸ:ಸಿರುಗುಪ್ಪ, ಬಳ್ಳಾರಿ

8. ನಿರಂಜನ,
ಬಿನ್ ಸದಾಶಿವಯ್ಯ,
ಸುಮಾರು 29 ವರ್ಷ,
ವಾಸ: ಹುಚ್ಚಗೊಂಡನಹಳ್ಳಿ ಗ್ರಾಮ,
ಕೋಟನಾಯಕನಹಳ್ಳಿ ಪೋಸ್ಟ್
ತಿಪಟೂರು ತಾಲ್ಲೂಕು.

(6 ನೇ ಪ್ರತಿವಾದಿಯರ ಪರವಾಗಿಃ ಶ್ರೀ ವಿ.ಜಿ.ಎಸ್ ., ವಕೀಲರು
(3, 4, 5 ನೇ ಪ್ರತಿವಾದಿಯರ ಪರವಾಗಿಃ ಶ್ರೀ ಜಿ.ಸಿ.ಎಂ., ವಕೀಲರು
(7 ಮತ್ತು 8 ನೇ ಪ್ರತಿವಾದಿಯರ ಪರವಾಗಿಃ ಶ್ರೀ ಕೆ.ವಿ.ಆ್ ವಕೀಲರು)
(1 ಮತ್ತು 2 ನೇ ಪ್ರತಿವಾದಿಯರು ಏಕಪಕ್ಷಿಯವಾಗಿರುತ್ತಾರೆ )

**ಮಧ್ಯಂತರ ಅರ್ಜಿ ಸಂಖ್ಯೆ-4 ರ ಪಕ್ಷಗಾರರು**

ಅರ್ಜಿದಾರರು /ವಾದಿ ಃ ಎನ್. ನಟರಾಜ ಮತ್ತು ಇತರರು

- ವಿರುದ್ಧ -

ಎದುರುದಾರರು /ಪ್ರತಿವಾದಿಯರು ಃ ಶ್ರೀವಲ್ಲಿ ಮತ್ತು ಇತರರು

| | | |
|---|---|---|
| 1 | ಯಾವ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆಃ | ಕ್ರಮಾದೇಶ 39 ನಿಯಮ 1 ಮತ್ತು 2 ಸಹವರ್ತಿ ಕಲಂ 151 ರನ್ವಯ ಸಲ್ಲಿಸಿದ ಮಧ್ಯಂತರ ಅರ್ಜಿ |
| 2 | ಯಾವ ಪರಿಹಾರಕ್ಕಾಗಿ | ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಕೋರಿ |
| 3 | ಯಾವ ದಿನಾಂಕದಂದು ಅರ್ಜಿಯನ್ನು ಸಲ್ಲಿಸಲಾಗಿದೆಃ | 03.03.2025 |

| | | |
|---|---|---|
| 4 | ಅರ್ಜಿಯ ವಿರುದ್ಧ ಆಕ್ಷೇಪಣೆಗಳನ್ನು ಸಲ್ಲಿಸಿದ ದಿನಾಂಕ | ಸಲ್ಲಿಸಿಲ್ಲ |
| 5 | ಸದರಿ ಅರ್ಜಿಯ ಮೇಲೆ ಘೋಷಿಸಿದ ಆದೇಶದ ದಿನಾಂಕಃ | 10.06.2026 |

**ಅರ್ಜಿದಾರರು / ವಾದಿಯರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವರ್ತಿ ಕಲಂ 151 ರನ್ವಯ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆಃ 4 ರ ಮೇಲಿನ ಆದೇಶ**

ಅರ್ಜಿದಾರರು /ವಾದಿ ಮಧ್ಯಂತರ ಅರ್ಜಿ 4 ನ್ನು ದಿವಾಣಿ ಪ್ರಕ್ರಿಯಾ ಸಹಿತ ಕ್ರಮಾದೇಶ 39 ನಿಯಮ 1 ಮತ್ತು 2 ಸಹಕಲಂ 151 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ. 2 ನೇ ಪ್ರತಿವಾದಿಯವರಾಗಲೀ ಅವರ ಏಜೆಂಟ್‌ರವರಾಗಲೀ, ಕೆಲಸಗಾರರಾಗಲೀ ಹಿಂಬಾಲಕರಾಗಲೀ, ಸಂಬಂಧಿಕರಾಗಲೀ, ಸ್ನೇಹಿತರಾಗಲೀ ದಾವಾ ಆಸ್ತಿಯನ್ನು ಯಾರಿಗೂ ಕೂಡ ಮಾರಾಟ ಮಾಡದಂತೆ, ದಾನ ಪತ್ರ ಬರೆದು ಕೊಡದಂತೆ ಅಡಮಾನ ಮಾಡದಂತೆ, ವಿಲ್ ನಾಮೆ ಮಾಡದಂತೆ ಆದೇಶ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

**ಅರ್ಜಿಯ ಆಸ್ತಿಯ ವಿವರಗಳು ಈ ಕೆಳಗಿನಂತೆ ಇರುತ್ತದೆ ಃ**

**ದಾವಾ ಶೆಡ್ಯೂಲ್ "ಎ" ಆಸ್ತಿ**

1. ಹಿರಿಯೂರು ತಾಲ್ಲೂಕಿನ ಕಸಬಾ ಹೋಬಳಿಯ ಹಿರಿಯೂರು ಗ್ರಾಮದಲ್ಲಿ ನೆಲೆಗೊಂಡಿರುವ, ಒಟ್ಟು 5 ಎಕರೆ ವಿಸ್ತೀರ್ಣದ ಕೃಷಿ ಭೂಮಿ, ಅದರಲ್ಲಿ 1 ಎಕರೆ 10 ಗುಂಟೆ ದಕ್ಷಿಣ ದಿಕ್ಕಿಗೆ, ರೂ.0.33 ಪೈಸೆ ಎಂದು ಅಂದಾಜಿಸಲಾಗಿದೆ, ಇದನ್ನು ಈ ಕೆಳಗಿನಂತೆ ಸುತ್ತುವರೆದಿದೆ:–

ಪೂರ್ವ : ಸೈ.ನಂ.386 ರಲ್ಲಿ ಹನುಮಂತಪ್ಪ, ಕೈರಿಯಪ್ಪ, ಕೆಂಚಪ್ಪ, ಎನ್.ತಾಯಣ್ಣ ಅವರಿಗೆ ಸೇರಿದ ಜಮೀನು ಮತ್ತು ಸೈ.ನಂ.17/1 ರಲ್ಲಿ ಕೆ.ಆರ್.ಶಿವಪ್ರಸಾದ್ ಅವರಿಗೆ ಸೇರಿದ ಜಮೀನು.

| | | |
|---|---|---|
| ಪಶ್ಚಿಮ | : | ಸ.ನಂ.219 ರಲ್ಲಿ ಪಿ.ನಾಗರತ್ನಮ್ಮ ಎಂಬುವರಿಗೆ ಜಮೀನು ಸೇರಿದೆ. |
| ಉತ್ತರ | : | ಜಮೀನು ವಾದಿ ಸಂಖ್ಯೆ2 ಗೆ ಸೇರಿದೆ, ಅಂದರೆ, 'ಬಿ' ಶೆಡ್ಯೂಲ್ ಆಸ್ತಿ ಗೆ ಸೇರಿದೆ. |
| ದಕ್ಷಿಣ | : | ಸೈ.ನಂ.220/2 ರಲ್ಲಿ ಕೆ.ಮಂಜುಳಾ, ಲಕ್ಷ್ಮಿ, ಶಾರದಾ, ಕೆ.ಶ್ರೀನಿವಾಸ ಅವರಿಗೆ ಸೇರಿದ ಜಮೀನುಗಳು. |

**ದಾವಾ ಶೆಡ್ಯೂಲ್ "ಬಿ" ಆಸ್ತಿ**

2. ಹಿರಿಯೂರು ತಾಲ್ಲೂಕಿನ ಕಸಬಾ ಹೋಬಳಿಯ ಹಿರಿಯೂರು ಗ್ರಾಮದಲ್ಲಿ ಒಟ್ಟು 5 ಎಕರೆ ವಿಸ್ತೀರ್ಣದ ಕೃಷಿ ಭೂಮಿ ಸಂಖ್ಯೆ 220/1 ಇದ್ದು, ಅದರಲ್ಲಿ ಒಂದು ಎಕರೆ 10 ಗುಂಟೆ ಮಧ್ಯ ಭಾಗವು ರೂ.0.33 ಪೈಸೆ ಎಂದು ಅಂದಾಜಿಸಲಾಗಿದೆ, ಇದನ್ನು ಈ ಕೆಳಗಿನಂತೆ ಸುತ್ತುವರೆದಿದೆ:–

| | | |
|---|---|---|
| ಪೂರ್ವ | : | ಸೈ.ನಂ.386 ರಲ್ಲಿ ಹನುಮಂತಪ್ಪ, ಕೈರಿಯಪ್ಪ, ಕೆಂಚಪ್ಪ, ಎನ್.ತಾಯಣ್ಣ ಅವರಿಗೆ ಸೇರಿದ ಜಮೀನು ಮತ್ತು ಸೈ.ನಂ.17/1 ರಲ್ಲಿ ಕೆ.ಆರ್.ಶಿವಪ್ರಸಾದ್ ಅವರಿಗೆ ಸೇರಿದ ಜಮೀನು. |
| ಪಶ್ಚಿಮ | : | ಸ.ನಂ.219 ರಲ್ಲಿ ಪಿ.ನಾಗರತ್ನಮ್ಮ ಎಂಬುವರಿಗೆ ಜಮೀನು ಸೇರಿದೆ. |
| ಉತ್ತರ | : | ಭೂಮಿ ವಾದಿ ಸಂಖ್ಯೆ3 ಅಂದರೆ 'ಸಿ' ಶೆಡ್ಯೂಲ್ ಆಸ್ತಿಗೆ ಸೇರಿದೆ. |
| ದಕ್ಷಿಣ | : | ಜಮೀನುಗಳು ವಾದಿ ಸಂಖ್ಯೆ 1 ಅಂದರೆ, "ಎ" ಶೆಡ್ಯೂಲ್ ಆಸ್ತಿಗೆ ಸೇರಿವೆ. |

**ದಾವಾ ಶೆಡ್ಯೂಲ್ "ಸಿ" ಆಸ್ತಿ**

3. ಹಿರಿಯೂರು ತಾಲ್ಲೂಕಿನ ಕಸಬಾ ಹೋಬಳಿಯ ಹಿರಿಯೂರು ಗ್ರಾಮದಲ್ಲಿ ನೆಲೆಗೊಂಡಿರುವ, ಒಟ್ಟು 5 ಎಕರೆ ವಿಸ್ತೀರ್ಣದ ಕೃಷಿ ಭೂಮಿ, ಅದರಲ್ಲಿ 1 ಎಕರೆ 10 ಗುಂಟೆ ಮಧ್ಯ ಭಾಗ, ರೂ.0.33 ಪೈಸೆ ಎಂದು ಅಂದಾಜಿಸಲಾಗಿದೆ, ಇದನ್ನು ಈ ಕೆಳಗಿನಂತೆ ಸುತ್ತುವರೆದಿದೆ:–

| | | |
|---|---|---|
| ಪೂರ್ವ | : | ಸೈ.ನಂ.386 ರಲ್ಲಿ ಹನುಮಂತಪ್ಪ, ಕೈರಿಯಪ್ಪ, ಕೆಂಚಪ್ಪ, ಎನ್.ತಾಯಣ್ಣ ಅವರಿಗೆ ಸೇರಿದ ಜಮೀನು ಮತ್ತು ಸೈ.ನಂ.17/1 ರಲ್ಲಿ ಕೆ.ಆರ್.ಶಿವಪ್ರಸಾದ್ ಅವರಿಗೆ ಸೇರಿದ ಜಮೀನು. |
| ಪಶ್ಚಿಮ | : | ಸ.ನಂ.219 ರಲ್ಲಿ ಪಿ.ನಾಗರತ್ನಮ್ಮ ಎಂಬುವರಿಗೆ ಜಮೀನು ಸೇರಿದೆ. |
| ಉತ್ತರ | : | ಭೂಮಿ ವಾದಿ ಸಂಖ್ಯೆ 4 ಅಂದರೆ 'ಡಿ' ಶೆಡ್ಯೂಲ್ ಆಸ್ತಿಗೆ ಸೇರಿದೆ. |
| ದಕ್ಷಿಣ | : | ಜಮೀನುಗಳು ವಾದಿ ಸಂಖ್ಯೆ 2 ಗೆ ಸೇರಿವೆ, ಅಂದರೆ, ಮೊಕದ್ದಮೆ "ಬಿ" ವೇಳಾಪಟ್ಟಿ ಆಸ್ತಿ |

## ದಾವಾ ಶೆಡ್ಯೂಲ್ "ಡಿ" ಆಸ್ತಿ

4. ಹಿರಿಯೂರು ತಾಲ್ಲೂಕಿನ ಕಸಬಾ ಹೋಬಳಿಯ ಹಿರಿಯೂರು ಗ್ರಾಮದಲ್ಲಿ ನೆಲೆಗೊಂಡಿರುವ, ಒಟ್ಟು 5 ಎಕರೆ ವಿಸ್ತೀರ್ಣದ ಕೃಷಿ ಭೂಮಿ, ಅದರಲ್ಲಿ 1 ಎಕರೆ 10 ಗುಂಟೆ ಉತ್ತರ ದಿಕ್ಕಿನ ಕಡೆಗೆ, 0.33 ಪೈಸೆ ರೂ.ಗೆ ಅಂದಾಜಿಸಲಾಗಿದೆ, ಇದು ಈ ಕೆಳಗಿನಂತೆ ಸುತ್ತುವರೆದಿದೆ:-

| | | |
|---|---|---|
| ಪೂರ್ವ | : | ಸೈ.ನಂ.386 ರಲ್ಲಿ ಹನುಮಂತಪ್ಪ, ಕರಿಯಪ್ಪ, ಕೆಂಚಪ್ಪ, ಎನ್.ತಾಯಣ್ಣ ಅವರಿಗೆ ಸೇರಿದ ಜಮೀನು ಮತ್ತು ಸೈ.ನಂ.17/1 ರಲ್ಲಿ ಕೆ.ಆರ್.ಶಿವಪ್ರಸಾದ್ ಅವರಿಗೆ ಸೇರಿದ ಜಮೀನು. |
| ಪಶ್ಚಿಮ | : | ಸ.ನಂ.219 ರಲ್ಲಿ ಪಿ.ನಾಗರತ್ನಮ್ಮ ಎಂಬುವರಿಗೆ ಜಮೀನು ಸೇರಿದೆ. |
| ಉತ್ತರ | : | ಜಮೀನು ಸ.ನಂ.14/1 ರಲ್ಲಿ ನಿರ್ಮಲಾ ಪಾಂಡುರಂಗ ನಾಯ್ಕು ಎಂಬುವರಿಗೆ ಸೇರಿದ್ದು |
| ದಕ್ಷಿಣ | : | ಜಮೀನುಗಳು ವಾದಿ ಸಂಖ್ಯೆ 3 ಗೆ ಸೇರಿವೆ, ಅಂದರೆ,"ಸಿ" ವೇಳಾಪಟ್ಟಿ ಆಸ್ತಿಯ ಮೊಕದ್ದಮೆ. |

2. ವಾದಿಯು ಮಧ್ಯಂತರ ಅರ್ಜಿಗೆ ಪೂರಕವಾಗಿ ತಮ್ಮ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. ಆ ಪ್ರಮಾಣ ಪತ್ರದ ಸಾರಾಂಶ ಈ ಕೆಳಗಿನಂತಿದೆ.

ಈ ದಾವೆಯಲ್ಲಿ ಅವರು 1 ನೇ ವಾದಿಯಾಗಿದ್ದು ವಾದಿ 2 ಮತ್ತು 3 ಅವರ ಸಹೋದರರಾಗಿದ್ದು 4 ನೇ ವಾದಿಯು ಅವರ ಸೋದರ ಸಂಬಂಧಿಯಾಗಿದ್ದು ಅವರು ಪ್ರತಿವಾದಿಯ ವಿರುದ್ಧ ಘೋಷಣಾತ್ಮಕ ಮತ್ತು ಶಾಶ್ವತ ನಿರ್ಬಂಧಾಕಾಜ್ಞೆಯನ್ನು ಕೋರಿ ಸಲ್ಲಿಸಿರುತ್ತಾರೆಂದು , ಅವರು ದಾವಾಸ್ತಿಗೆ ಮಾಲೀಕರಾಗಿದ್ದು ಸೃಷ್ಟಿಸಲ್ಪಟ್ಟ ಕ್ರಯಪತ್ರ , ಆರ್ ಟಿ ಸಿ, ಮತ್ತು ಮ್ಯುಟೇಶನ್ ಆಧಾರದ ಮೇಲೆ 2 ನೇ ಪ್ರತಿವಾದಿಯು ದಾವಾಸ್ತಿಯನ್ನು ಮಾರಾಟ ಮಾಡಲು ಪ್ರಯತ್ನ ಮಾಡುತ್ತಿದ್ದು ಅವರು ದಾವಾಸ್ತಿಗೆ ಸಂಪೂರ್ಣ ಮಾಲೀಕರು ಮತ್ತು ಸ್ವಾಧೀನದಲ್ಲಿದ್ದು 4 ನೇ ವಾದಿಯು ಸೃಷ್ಟಿಸಿದ್ದ ದಾಖಲಾತಿಯಾದ ಮಾರಾಟ ಪತ್ರ ಆರ್ ಟಿ ಸಿ ಮ್ಯುಟೇಶನ್ ಮುಂತಾದವುಗಳ ಆಧಾರದ ಮೇಲೆ 2 ನೇ ಪ್ರತಿವಾದಿಯು ದಾವಾಸ್ತಿಗಳನ್ನು 3 ನೇ ವ್ಯಕ್ತಿಗೆ ವರ್ಗಾಯಿಸಲು ಹಾಗೂ 3 ನೇ ವ್ಯಕ್ತಿಗೆ ಹಕ್ಕುಗಳನ್ನು ಸೃಷ್ಟಿಸಲು ತೀವ್ರ ಪ್ರಯತ್ನ ಮಾಡುತ್ತಿರುತ್ತಾರೆ.

ವಾದಿಯು ಪ್ರತಿವಾದಿಯರಲ್ಲಿ 3 ನೇ ವ್ಯಕ್ತಿಗೆ ಹಕ್ಕುಗಳನ್ನು ಸೃಷ್ಟಿಸಬಾರದೆಂದು ಮನವಿ ಮಾಡಿದ್ದರೂ ಕೂಡ ಪ್ರತಿವಾದಿಯರು ಮನವಿಯನ್ನು ಪಾಲಿಸಿಲ್ಲ ಪ್ರತಿವಾದಿಯವರ ಈ ಕೃತ್ಯವನ್ನು ನ್ಯಾಯಾಲಯದ ಸಹಾಯವಿಲ್ಲದೆ ತಡೆಯಲು ಸಾಧ್ಯವಿಲ್ಲ ಪ್ರತಿವಾದಿಯ ಬಳಿ ಜನಬಲ ಮತ್ತು ಹಣ ಬಲ ಇರುತ್ತದೆ. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ.

3. ಪ್ರತಿವಾದಿಯು ಮಧ್ಯಂತರ ಅರ್ಜಿಗೆ ಯಾವುದೇ ತಕರಾರರನ್ನು ಸಲ್ಲಿಸಿರುವುದಿಲ್ಲ .

4. ವಾದವನ್ನು ಆಲಿಸಲಾಯಿತು .

5. ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುವ ಅಂಶಗಳುಃ–

1. ವಾದಿಯು ಈ ಮಧ್ಯಂತರ ಅರ್ಜಿ ಸಂಖ್ಯೆ *4* ರಲ್ಲಿ ಕೋರಿರುವಂತೆ,ತಾತ್ಕಾಲಿಕ ನಿರ್ಬಂಧಾಕಾಜ್ಞೆಯನ್ನು ಪಡೆಯಲು ಇರುವಂತಹ ಕಾರಣಗಳನ್ನು ತೋರಿಸಿದ್ದಾರೆಯೇ*?*
2. ಯಾವ ಆದೇಶ*?*

## ಕಾ ರ ಣ ಗ ಳು

6. **ಅಂಶ–1**ಃ ವಾದಿಯು ತನ್ನ ವಾದ ಪತ್ರದಲ್ಲಿ ಎಂ ಸಂಜೀವಪ್ಪ ಇವರಿಗೆ ಸಾಲಮ್ಮ ಎನ್ನುವ ಹೆಂಡತಿ ಇದ್ದು ಅವರಿಗೆ ಶಾರದಮ್ಮ ಎನ್ನುವ ಮಗಳು ಮತ್ತು ನರಸಿಂಹಮೂರ್ತಿ ಮತ್ತು ಚಂಚಲಕುಮಾರ ಎನ್ನುವ ಮಕ್ಕಳಿದ್ದು, ನರಸಿಂಹ ಮೂರ್ತಿರವರಿಗೆ ದಾಕ್ಷಾಯಿಣಿ ಎನ್ನುವ ಹೆಂಡತಿಯಿದ್ದು ವಾದಿ 1 ರಿಂದ 3 ರವರು ಅವರ ಮಕ್ಕಳಾಗಿದ್ದು ಮೂರನೇ ಮಗ ಚಂಚಲಕುಮಾರ ಇವರಿಗೆ ಶಿವಲಿಂಗಮ್ಮ ಮತ್ತು ವನಜಾಕ್ಷಮ್ಮ ಎನ್ನುವ ಹೆಂಡತಿಯರಿದ್ದು ಶಿವಲಿಂಗಮ್ಮ ಇವರಿಗೆ 4 ನೇ ವಾದಿ ಸಿ ಗೋಪಿ ಮಗನಿದ್ದು ಮತ್ತು ಎರಡನೇ ಹೆಂಡತಿ ವನಜಾಕ್ಷಮ್ಮ ಇವರಿಗೆ ಸಿ ಸುಶ್ಮಾ ಎನ್ನುವ ಮಗಳಿರುತ್ತಾರೆಂದು, ವಾದಿಯ ಮುತ್ತಾತ ಎನ್ ಸಂಜೀವಪ್ಪ ಇವರು ಹಿರಿಯೂರು ಕಸಬಾ ಹೋಬಳಿ ಸರ್ವೇ ನಂ.220 ರಲ್ಲಿ 5 ಎಕರೆ 32 ಗುಂಟೆಗೆ ಮಾಲೀಕರಾಗಿ ಸ್ವಾಧೀನ ಹೊಂದಿದ್ದು ಆ ಜಮೀನನ್ನು ಅವರಿಗೆ ಸರ್ಕಾರವು 15 ವರ್ಷ ಪರಭಾರೆ ಮಾಡಬಾರದೆಂದು ಷರತ್ತಿನೊಂದಿಗೆ ಮಂಜೂರು ಮಾಡಿರುತ್ತದೆ. ಅದರಂತೆ ಸಾಗುವಳಿ ಚೀಟಿ ಕೂಡ ನೀಡಿರುತ್ತಾರೆಂದು ನಮೂದು ಮಾಡಿರುತ್ತಾರೆ.

7. ವಾದಿಯ ಪ್ರಕಾರ ವಾದಿಯ ತಾತ ತಮ್ಮ ಜೀವಿತಾವಧಿಯಲ್ಲಿ ಅಸಿಸ್ಟೆಂಟ್ ಕಮೀಷನರ್ ಚಿತ್ರದುರ್ಗ ಇವರ ಸಮಕ್ಷಮ ಭೂ ಹಸ್ತಾಂತರ ನಿಷೇಧ ಕಾಯ್ದೆಯಡಿಯಲ್ಲಿ ಖರೀದಿದಾರರ ವಿರುದ್ಧ ಕಾನೂನು ಕ್ರಮಗಳನ್ನು ಆರಂಭಿಸಿರುತ್ತಾರೆ. ಅಸಿಸ್ಟೆಂಟ್ ಕಮೀಷನರ್, ಚಿತ್ರದುರ್ಗ ಇವರು 20.09.1982 ಆದೇಶದಂತೆ ಆ ಅರ್ಜಿಯನ್ನು ಪುರಸ್ಕರಿಸಿ ಬೌದ್ಧಿಕ ಸ್ವಾಧೀನವನ್ನು ವಾದಿಯ ತಂದೆಗೆ ಹಸ್ತಾಂತರಿಸಬೇಕೆಂದು ಆದೇಶ ಮಾಡಿರುತ್ತಾರೆ, ಈ ಆದೇಶದ ವಿರುದ್ಧ ಪೆನ್ನಮ್ಮ ಇವರ ವಾರಸುದಾರರಾದ ಟಿ.ಎಸ್.ಚೆನ್ನಸ್ವಾಮಿ ಇವರು ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ನಂ.42612/1982 ರಂತೆ ರಿಟ್ ಅರ್ಜಿಯನ್ನು ಸಲ್ಲಿಸಿದ್ದು ತದನಂತರ ಗೌರವಾನ್ವಿತ ಉಚ್ಚ ನ್ಯಾಯಾಲಯವು ರಿಟ್ ಪಿಟೀಷನ್ ನ್ನು ವಜಾ ಗೊಳಿಸಿರುತ್ತಾರೆ, ತಹಸೀಲ್ದಾರ್ ರವರು ಸರ್ವೇ ನಂ.225 ರಲ್ಲಿ 5 ಎಕರೆ ಜಮೀನನ್ನು ಅವರ ಹೆಸರಿಗೆ ಖಾತೆ ಬದಲಾವಣೆ ಮಾಡಿರುತ್ತಾರೆ ಮತ್ತು ಎಸ್.ಸಿ.ಪಿ.ಟಿ.ಎನ್ ಆದೇಶದಂತೆ ಸ್ವಾಧೀನ ಕೊಟ್ಟು 2006-07 ರಲ್ಲಿ ದುರಸ್ತಿ ಪೋಡಿ ಮಾಡಿ ಸರ್ವೇ ನಂ.220/1 ಎಂದು ವಾದಿಯ ತಾತನ ಹೆಸರಿಗೆ ನಮೂದಾಗಿರುವುದು ಮತ್ತು ಸರ್ವೇ ನಂ.220/2 ಎಂದು 32 ಗುಂಟೆ ಟಿ.ವಿ ಕಣ್ಣಪ್ಪ ಅವರ ಹೆಸರಿಗೆ ಬದಲಾವಣೆಯಾಗಿರುತ್ತದೆ. ಅವರು ತೀರಿಕೊಂಡ ನಂತರ ಟಿ.ವಿ ಕಣ್ಣಪ್ಪನವರ ವಾರಸುದಾರರ ಹೆಸರಿಗೆ ಬದಲಾವಣೆಯಾಗಿರುತ್ತದೆ, ಆದ್ದರಿಂದ ವಾದಿಯು 32 ಗುಂಟೆ ಆಸ್ತಿ ಸರ್ವೇ ನಂ.227 ರಲ್ಲಿ ಯಾವುದೇ ಹಕ್ಕನ್ನು ಕೋರುವುದಿಲ್ಲ ಎಂಬುದಾಗಿರುತ್ತದೆ .

8. ವಾದಿಯುರು ಮುಂದುವರೆದು ತಮ್ಮ ವಾದ ಪತ್ರದಲ್ಲಿ ಅವರ ತಾಯಿ ಸಾಲಮ್ಮ ಸಾಕ್ಷಿದಾರರ ಸಮ್ಮುಖದಲ್ಲಿ ದಿಃ 15.10.2022 ರಂದು ವೀಲುನಾಮೆಯನ್ನು ಬರೆದಿಟ್ಟಿದ್ದು

ಆ ವೀಲುನಾಮೆಯು ಸಿಡಿ ನಂ.ಸಿಡಿಜಿ-1180, ಎಸ್ ಆರ್ ನಂ.149/2022-23 ನೊಂದಾವಣೆ ಯಾಗಿದ್ದು ಅವರು 08.02.2024 ರಂದು ತೀರಿಕೊಂಡಿರುತ್ತಾರೆಂದು ವಾದಿಯರು 2023-24 ರ ಪಹಣಿಯನ್ನು ಪಡೆಯಲು ಹೋದಾಗ 2 ನೇ ಪ್ರತಿವಾದಿಯ ಹೆಸರು ನಮೂದಾಗಿದ್ದು ತದನಂತರ ಅವರು ಸಬ್ ರಿಜಿಸ್ಟ್ರಾರ್ ಕಛೇರಿಯಿಂದ 26.03.2024 ರ ನೊಂದಾಯಿತ ಕ್ರಯ ಪತ್ರ ಪಡೆದುಕೊಂಡಿದ್ದು 1 ನೇ ಪ್ರತಿವಾದಿಯು ಪ್ರತ್ಯೇಕ ವ್ಯಕ್ತಿಯಾಗಿದ್ದು  ಅವರು ಸಂಜೀವಪ್ಪ ಇವರ ಹೆಂಡತಿಯಾಗಿರಲಿಲ್ಲ ಅವರು ತನ್ನನ್ನು ತಾನು ಸಾಲಮ್ಮ ಎಂದು ಪ್ರತಿನಿಧಿಸಿಕೊಂಡು ವಾದಿಯನ್ನು ವಂಚಿಸುವ ಉದ್ದೇಶದಿಂದ ಹಾಗೂ ಉದ್ದೇಶಪೂರ್ವಕವಾಗಿ ದಾವಾಸ್ತಿಯನ್ನು ಕಬಳಿಸುವ ಸಲುವಾಗಿ 2 ನೇ ಪ್ರತಿವಾದಿಯೊಂದಿಗೆ ಸೇರಿ ಸಂಚು ರೂಪಿಸಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಾಗೂ ಕಟ್ಟುಕತೆ,  ದಾಖಲಾತಿಗಳನ್ನು ತಯಾರಿಸಿರುತ್ತಾರೆ . ಪ್ರತಿವಾದಿ 1 ರ ಆಧಾರ್ ಕಾರ್ಡ್ ನಂ 495246906955 ಆಗಿದ್ದು ಆಕೆಯ ಜನ್ಮ ದಿನಾಂಕ 01.01.1984 ಆಗಿರುತ್ತದೆ. ಆದರೆ ನೊಂದಾವಣೆ ಮಾಡುವ ಸಮಯದಲ್ಲಿ 1 ನೇ ಪ್ರತಿವಾದಿಯು ಆಧಾರ್ ಕಾರ್ಡ್ ಸಂಖ್ಯೆ 547461930922 ಎಂದು ಹೆಸರು ಸಾಲಮ್ಮ ಎಂದು ಜನ್ಮ ದಿನಾಂಕ 01.01.1959 ಎಂದು ಅವರ ವಿಳಾಸ ಮನೆ ನಂ.#1-2-118/67, ವಾರ್ಡ್ ನಂ.3, ನಾಗೇಶ್ವರ ದೇವಸ್ಥಾನ, ಬ್ರಹಸಪಿತ , ಬಳ್ಳಾರಿ ಎಂದು ನಮೂದು ಮಾಡಿರುವುದು ಕಂಡು ಬರುತ್ತದೆ. ಆಧಾರ ಕಾರ್ಡ್ ನ್ನು ಪರಿಶೀಲಿಸಿದಾಗ ಆ ಆಧಾರ ಕಾರ್ಡ್ ಈ ಸೂರ್ಯಪ್ರಕಾಶ ಶೆಟ್ಟಿ ಬಿನ್ ತಿಮ್ಮಪ್ಪ ಶೆಟ್ಟಿ , ವಾಸಃ ವಾರ್ಡ್ ನಂ.19, ಓಲ್ಡ್ ಡೈಲಿ ಮಾರ್ಕೆಟ್ ಹತ್ತಿರ , ಮುದ್ದಾಪುರ ನಂ.10, ಕಂಪ್ಲಿ ಬಳ್ಳಾರಿ ಎನ್ನುವವರಿಗೆ ಸಂಬಂದಿಸಿದ್ದಾಗಿರುತ್ತದೆ  ಎಂದು ನಮೂದು ಮಾಡಿರುತ್ತಾರೆ.

9. ಪ್ರತಿವಾದಿ 3, 4, 5, 6 ಮತ್ತು 8 ರವರು ನ್ಯಾಯಾಲಯಕ್ಕೆ ಹಾಜರಾಗಿದ್ದರೂ ಕೂಡ ಯಾವುದೇ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ .

10. ವಾದಿಯು ದಾವೆಯಲ್ಲಿ ಉಲ್ಲೇಖಿಸಿರುವ ಈ ಎಲ್ಲಾ ಅಂಶಗಳನ್ನು ಪುರಾವೆಗೊಳಿಸಬೇಕಾದಲ್ಲಿ ಖಂಡಿತವಾಗಿ ಸಾಕ್ಷಾದಾರಗಳ ಅವಶ್ಯಕತೆ ಇರುತ್ತದೆ. 1 ನೇ ವಾದಿಯು ಎ ಶೆಡ್ಯೂಲ್ ಆಸ್ತಿಗೆ 2 ನೇ ವಾದಿ ಬಿ ಶೆಡ್ಯೂಲ್ ಆಸ್ತಿಗೆ 3 ನೇ ವಾದಿ ಸಿ ಶೆಡ್ಯೂಲ್ ಆಸ್ತಿಗೆ 4 ನೇ ವಾದಿ ಡಿ ಶೆಡ್ಯೂಲ್ ಅಸ್ತಿಗೆ ದಿಃ 15.10.2022 ರ ವೀಲುನಾಮೆಯ ಆಧಾರದ ಮೇಲೆ ಮಾಲೀಕರಾಗಿ ಸ್ವಾಧೀನ ಹೊಂದಿರುತ್ತಾರೆಂದು ಮತ್ತು ದಿಃ 02.03.2024 ರಂದು ಸೃಷ್ಟಿಸಲ್ಪಟ್ಟ ಕ್ರಯ ಪತ್ರವು ದಿಃ 07.03.2024 ರಂದು ನೊಂದಣಿಯಾಗಿರುವುದು ಅದು ಅವರಿಗೆ ಬಂಧನಕಾರಿಯಾಗಿರುವುದಿಲ್ಲವೆಂದು ಘೋಷಣೆ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

11. ಈ ಹಂತದಲ್ಲಿ ಪ್ರತಿವಾದಿಯವರು ದಾವಾ ಆಸ್ತಿಯನ್ನು ಮಾರಾಟ ಮಾಡಲು ಪ್ರಯತ್ನಿಸಿದ್ದಾರೋ ಅಥವಾ ಇಲ್ಲವೋ ಎನ್ನುವ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸುವಂತಹ ಅವಶ್ಯಕತೆ ಇರುವುದಿಲ್ಲ. ಆದರೆ ದಾವೆಯು ವಿವಾದದಲ್ಲಿರುವಾಗ ದಾವಾ ಸ್ವತ್ತಿಗೆ ಹಾನಿಯಾಗುತ್ತದೆ ಎಂಬ ಭಯವಿದ್ದರೂ ಕೂಡ ಅದನ್ನು ತಡೆಯುವುದು ಅವಶ್ಯಕತೆಯಾಗಿರುತ್ತದೆ.

12. ದಾವೆಯು ವಿವಾದದಲ್ಲಿರುವಾಗ ಯಾವುದೇ ಸ್ವತ್ತು ದಾವೆಯ ಯಾವುದೇ ಪಕ್ಷಗಾರರಿಂದ ಹಾನಿಗೊಳಗಾಗುವ ಅಥವಾ ಪರಭಾರೆ ಮಾಡುವ ಅಥವಾ ವಾದಿಯ ಸ್ವಾಧೀನದಿಂದ ತಪ್ಪಿಸುವುದಕ್ಕಾಗಿ ಪ್ರಯತ್ನ ಮಾಡುತ್ತಿದ್ದಲ್ಲಿ ಮುಂದಿನ ಆದೇಶವಾಗುವವರೆಗೆ ಅಂತಹ ಕೃತ್ಯವನ್ನು ನಿಗ್ರಹಿಸುವ ಮೂಲಕ ನ್ಯಾಯಾಲಯವು ಆದೇಶದ ಮೂಲಕ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬಹುದಾಗಿದೆ, ದಾವಾ ಸ್ವತ್ತಿನ ಬಗ್ಗೆ ವಾದಿಸುತ್ತಿರುವ

ಪಕ್ಷಗಾರರು ತಮ್ಮ ಹಕ್ಕುಗಳನ್ನು ನಿರ್ಣಯಿಸುವವರೆಗೆ ದಾವಾ ಸ್ವತ್ತಿನ ಸ್ಥಿತಿ–ಗತಿಗಳನ್ನು ದಾವೆ ಹೂಡುವಾಗ ಇದ್ದ ಸ್ಥಿತಿಯಲ್ಲಿ ಇರಿಸಿಕೊಂಡು ಹೋಗಬೇಕೆಂದು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಾಡಬೇಕೆಂದು ಇರುವ ಇನ್ನೊಂದು ಮಹತ್ವದ ಉದ್ದೇಶವಾಗಿರುತ್ತದೆ.

13. ವಾದಿಯರು ಕೇವಲ ಈ ದಾವೆಯು ಮುಗಿಯುವರೆಗೆ ಪ್ರತಿವಾದಿಯರು ದಾವಾ ಆಸ್ತಿಯನ್ನು ಯಾರಿಗೂ ಯಾವುದೇ ರೀತಿಯಿಂದ ಪರಭಾರೆ ಮಾಡದಂತೆ ಮತ್ತು ಯಾವುದೇ ಋಣಭಾರ ಹೊರಿಸದಂತೆ ಈ ದಾವೆಯ ಅಂತಿಮ ಆದೇಶ ಆಗುವವರೆಗೂ ಪ್ರತಿವಾದಿಯರಿಗೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬೇಕೆಂದು ಕೋರಿಕೊಂಡಿರುವುದು ಕಂಡು ಬಂದಿದ್ದು, ಒಂದು ವೇಳೆ ದಾವೆ ಚಾಲ್ತಿಯಲ್ಲಿರುವಾಗ ದಾವಾ ಆಸ್ತಿಯನ್ನು ಪ್ರತಿವಾದಿಯರು ಮಾರಾಟ ಮಾಡಿದ್ದಲ್ಲಿ ವಾದಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ ಹಾಗೂ ಅನಾನುಕೂಲತೆಯ ಒಲವು ವಾದಿಯರ ಪರವಾಗಿರುತ್ತದೆ, ಈ ಹಂತದಲ್ಲಿ ಈ ಅರ್ಜಿಯನ್ನು ಪುರಸ್ಕರಿಸಲು ವಾದಿಯ ಮೇಲ್ನೋಟಕ್ಕೆ ಸಮ್ಮತವಾದ ದಾವೆಯನ್ನು ಹೊಂದಿದ್ದಾರೆಂದು ಕಂಡು ಬಂದಿರುತ್ತದೆ. ಅಲ್ಲದೇ ಈ ದಾವೆಯಲ್ಲಿ ಅಂತಿಮ ತೀರ್ಪು ಆಗುವವರೆಗೂ ದಾವಾ ಆಸ್ತಿಯನ್ನು ಬೇರೆ ಯಾರಿಗೂ ಮಾರಾಟ ಮಾಡಬಾರದಂತೆ ಆದೇಶ ಮಾಡಿದ್ದಲ್ಲಿ, ಪ್ರತಿವಾದಿಯರಿಗೆ ಯಾವುದೇ ರೀತಿಯಾದಂತಹ ತೊಂದರೆ ಉಂಟಾಗುವುದಿಲ್ಲ. ಆದ್ದರಿಂದ, ಮೇಲೆ ಹೇಳಿದ ಕಾರಣಗಳಿಂದಾಗಿ ಅಂಶ–1 ನ್ನು ಉತ್ತರಿಸಲಾಗಿದೆ .

14. **ಅಂಶ–2**– ಮೇಲೆ ಹೇಳಿದ ಕಾರಣಗಳಿಂದ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**ಆದೇಶ**

ಅರ್ಜಿದಾರರು / ವಾದಿಯರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವರ್ತಿ ಕಲಂ 151 ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ: 4 ನ್ನು ಪುರಸ್ಕರಿಸಲಾಗಿದೆ.

2 ನೇ ಪ್ರತಿವಾದಿಯವರಾಗಲೀ ಅವರ ಏಜೆಂಟ್ ರವರಾಗಲೀ, ಕೆಲಸಗಾರರಾಗಲೀ ಹಿಂಬಾಲಕರಾಗಲೀ, ಸಂಬಂಧಿಕರಾಗಲೀ, ಸ್ನೇಹಿತರಾಗಲೀ ದಾವಾ ಆಸ್ತಿಯನ್ನು ಯಾರಿಗೂ ಕೂಡ ಮಾರಾಟ ಮಾಡದಂತೆ, ದಾನ ಪತ್ರ ಬರೆದು ಕೊಡದಂತೆ ಅಡಮಾನ ಮಾಡದಂತೆ, ವಿಲ್ ನಾಮೆ ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಲಾಗಿದೆ.

(ಆದೇಶವನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ, ನಂತರ ಓದಿ, ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ 10 ನೇ ಜೂನ್ –2026 ರಂದು ಘೋಷಿಸಲಾಯಿತು)

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು.

SUJATHA SUVARNA B

Digitally signed by SUJATHA SUVARNA B
Date: 2026.06.16 12:16:45 +0530